# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಉಪನ್ಯಾಸಕರು ಗಳಿಗೆ ನಿಯೋಜನೆ ಭತ್ಯೆಯನ್ನು ಹೆಚ್ಚಿಸುವ ಬಗ್ಗೆ.

ಓದಲಾಗಿದೆ:- 1) ಸರ್ಕಾರಿ ಆದೇಶ ಸಂಖ್ಯೆ: ಇಡಿ 482 ಎಇಪಿಐ 1995, ದಿನಾಂಕ: 27.10.1995.

2) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರ ಪತ್ರ ಸಂಖ್ಯೆ:ಪಪೂಶಿಇ 87 ಸಿಬ್ಬಂದಿ2 ನಿ.ಭತ್ಯೆ 2008, ದಿನಾಂಕ:04.01.2010 ಹಾಗೂ 18.02.2011

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮಾಂಕ (1)ರ ದಿನಾಂಕ: 27.10.1995ರ ಸರ್ಕಾರದ ಆದೇಶದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ವಿವಿಧ ಉಪನ್ಯಾಸಕರುಗಳ ಹುದ್ದೆಗಳನ್ನು ಒತ್ತಡ ಕಡಿಮೆ ಇರುವ ಹತ್ತಿರದ ಕಾಲೇಜುಗಳಿಂದ ವಾರದಲ್ಲಿ ಮೂರು ದಿನಗಳು ಕೊರತೆಯಿರುವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುವಂತೆ ಹಾಗೂ ಈ ಕರ್ತವ್ಯ ನಿರ್ವಹಿಸಲು ತೆರಳುವುದಕ್ಕೆ ಪ್ರಯಾಣ ಭತ್ಯೆ ಮತ್ತು ಇತರೆ ಸೇರಿದಂತೆ ತಗಲುವ ವೆಚ್ಚಕ್ಕಾಗಿ ರೂ.300.00 ಗಳನ್ನು ಮಾಸಿಕ ಸಂಭಾವನೆಯಾಗಿ ಕೆಲವೊಂದು ಷರತ್ತಿಗೊಳಪಟ್ಟು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (2)ರಲ್ಲಿ ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರ ದಿನಾಂಕ: 04.01.2010 ಹಾಗೂ 18.02.2011ರ ಪತ್ರಗಳಲ್ಲಿ ಇತ್ತೀಚಿಗೆ ಸಾರಿಗೆ ದರದಲ್ಲಿ ಹೆಚ್ಚಳವಾಗಿದ್ದು ಕಡಿಮೆ ಕಾರ್ಯಭಾರವಿರುವ ಉಪನ್ಯಾಸಕರ ನಿಯೋಜನೆಯನ್ನು ವಾರದಲ್ಲಿ ಮೂರು ದಿನಗಳಂತೆ ಕಾರ್ಯಭಾರ ಕೊರತೆಯಿರುವ ಕಾಲೇಜುಗಳಿಗೆ ನಿಯೋಜಿಸಲಾಗುತ್ತಿದ್ದು, ಈ ನಿಯೋಜನೆಯು ಕೆಲವೊಮ್ಮೆ 50.ಕಿ.ಮೀ ದೂರದಲ್ಲಿರುವ ಕಾಲೇಜುಗಳಿಗೆ ನಿಯೋಜಿಸುತ್ತಿದ್ದು, ಸದರಿ ನಿಯೋಜನ ಭತ್ಯೆಯನ್ನು ರೂ.300.00 ರಿಂದ ರೂ.1200.00 ಗಳಿಗೆ ಹೆಚ್ಚಿಸಿದ್ದಲ್ಲಿ ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳಿಗೆ ತೊಂದರೆಯಾಗದಂತೆ ಉಪನ್ಯಾಸಕರ ನಿಯೋಜನೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೊಳಿಸಬಹುದೆಂದು ಅಭಿಪ್ರಾಯಿಸುತ್ತಾ, ಸರ್ಕಾರಿ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ನಿಯೋಜನ ಭತ್ಯೆಯನ್ನು ರೂ.300.00 ರಿಂದ ರೂ.1200.00 ಗಳಿಗೆ ಹೆಚ್ಚಿಸುವಂತೆ ಕೋರಿದ್ದು, ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 312 ಡಿಜಿಡಿ 2012**
**ಬೆಂಗಳೂರು, ದಿನಾಂಕ: 05/09/2014**

ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ವಿವಿಧ ಉಪನ್ಯಾಸ್ಕಕರುಗಳ ಹುದ್ದೆಗಳನ್ನು ಒತ್ತಡ ಕಡಿಮೆ ಇರುವ ಹತ್ತಿರದ ಕಾಲೇಜುಗಳಿಂದ ವಾರದಲ್ಲಿ 3 ದಿನಗಳು ಕೊರತೆ ಇರುವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುವಂತೆ ಹಾಗೂ ಈ ಕರ್ತವ್ಯ ನಿರ್ವಹಿಸಲು ತೆರಳುವುದಕ್ಕೆ ಪ್ರಯಾಣ ಭತ್ಯೆ ಹಾಗೂ ಇತ್ಯಾದಿ ಸೇರಿದಂತೆ ತಗಲುವ ವೆಚ್ಚ ರೂ.300/- ರಿಂದ ರೂ.750/-ಕ್ಕೆ ಪರಿಷ್ಕರಿಸಿ, ರೂ.750/- (ರೂಪಾಯಿ ಏಳು ನೂರ ಐವತ್ತು ಮಾತ್ರ) ಗಳನ್ನು ಮಾಸಿಕ ಸಂಭಾವನೆಯಾಗಿ ಈ ಕೆಳಗಿನ ಷರತ್ತುಗಳಿಗೊಳಪಟ್ಟು ಮಂಜೂರು ಮಾಡಿ ಆದೇಶಿಸಿದೆ.

ಅ) ಕೆಲಸದ ಒತ್ತಡ ಕಡಿಮೆ ಇರುವ ಎರಡೂ ಕಿರಿಯ ಕಾಲೇಜುಗಳಲ್ಲಿಯೂ ವಾರದಲ್ಲಿ ಮೂರು ಮೂರು ದಿನಗಳ ಕರ್ತವ್ಯವನ್ನು ತಪ್ಪದೆ ನಿರ್ವಹಿಸಿರಬೇಕು. ಇದಕ್ಕಾಗಿ ಹಾಜರಾತಿ ಸರ್ಟಿಫಿಕೇಟನ್ನು ಪ್ರತಿ ತಿಂಗಳು ಒದಗಿಸತಕ್ಕದ್ದು. ಈ ರೀತಿಯ ಹಾಜರಾತಿ ಸರ್ಟಿಫಿಕೇಟ್ ಇಲ್ಲದೆ ಸದರಿ ಸಂಭಾವನೆಯನ್ನು ಮಂಜೂರು ಮಾಡಕೂಡದು.

ಆ) ಈ ರೀತಿ ನಿಯೋಜಿಸಿ ಉಪನ್ಯಾಸಕರುಗಳು ರಜೆ ಹಾಕಿದಲ್ಲಿ ಮಾಸಿಕ ಹೆಚ್ಚುವರಿಯಾಗಿ ನೀಡಲಾಗುವ ಸಂಭಾವನೆಯಲ್ಲಿ ರಜೆ ದಿನಗಳಿಗೆ ಪರ್ಯಾಯವಾಗಿ ಕಡಿತ ಮಾಡಿ ಉಳಿದ ಹಣವನ್ನು ನೀಡತಕ್ಕದ್ದು.

ಇ) ಇಂಥ ಉಪನ್ಯಾಸಕರುಗಳು ಮಾಸಿಕ ಆರು ದಿನಗಳಿಗೂ ಮೀರಿ ರಜೆ ಹಾಕಿದಲ್ಲಿ ಅಂಥ ಉಪನ್ಯಾಸಕರುಗಳು ಆ ತಿಂಗಳ ಸದರಿ ಸಂಭಾವನೆಯನ್ನು ಪಡೆಯಲು ಅರ್ಹರಾಗಿರುವುದಿಲ್ಲ.

ಈ) ಹಿರಿಯ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರುಗಳ ಹುದ್ದೆಗಳಿಗೆ ಅಂಶಕಾಲಿಕವಾಗಿಯಾಗಲಿ ಅಡ್ ಹಾಕ್ ಆಧಾರದ ಮೇಲಾಗಲಿ ಯಾವುದೇ ತಾತ್ಕಾಲಿಕ ನೇಮಕಾತಿ ಮಾಡಕೂಡದು.

ಉ) ಇವರ ವೇತನ ಶ್ರೇಣಿಯನ್ನು ಅವರು ಮೊದಲು ಕಾರ್ಯನಿರ್ವಹಿಸುತ್ತಿದ್ದ ಹುದ್ದೆಯಲ್ಲಿಯೇ ಪರಿಗಣಿಸಬೇಕು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 753 ವೆಚ್ಚ-8/2014, ದಿನಾಂಕ: 15.07.2014 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆರ್.ಸೋಮಶೇಖರ್) 5/9
ಸರ್ಕಾರದ ಅಧೀನ ಕಾರ್ಯದರ್ಶಿ,
5/9/14 ಶಿಕ್ಷಣ ಇಲಾಖೆ, (ಪದವಿ ಪೂರ್ವ)

## ಕರ್ನಾಟಕ ಸರ್ಕಾರ

**ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು**

ಸಂಖ್ಯೆ:ಪಪೂಶಿಇ/ಸಿಬ್ಬಂದಿ-2/ನಿ.ಭ/87/2008 ದಿನಾಂಕ: 4-10-2014

ಸರ್ಕಾರದ ಆದೇಶದ ಪ್ರತಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಹಾಗೂ ಪ್ರಾಂಶುಪಾಲರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

## GOVERNMENT OF KARNATAKA

No.FD 31 SRP 2007

Karnataka Government Secretariat
Vidhana Soudha,
Bangalore, dated 28-07-2014

## CORRIGENDUM

Clause (iii) of Para-1of the Order portion of Government Order of even number dated 29-8-2008 shall be substituted as follows :-

> "(iii) In respect of Secondary School Teachers and PU Lecturers who were appointed prior to 01.08.2008, the Special Allowance of Rs 200/-p.m sanctioned w.e.f. 01.04.2006 in GO No FD 14 SRP 2006, dated 12.05.2006 shall be continued until further orders."

After the above clause (iii) the following entries shall be inserted as clause (iv):-

> "(iv) The Secondary School Teachers and PU Lecturers who are appointed on or after 01.08.2008 are not entitled for Special Allowance of Rs 200/-p.m. in terms of G.O. No FD 14 SRP 2006 dated 12.5.2006".

By Order and in the name of the
Governor of Karnataka,

(SUNDARA RAJA GUPTHA)
Joint Secretary to Government
Finance Department (Services-2)

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, 18ನೇ ಅಡ್ಡರಸ್ತೆ, ಬೆಂಗಳೂರು-12

ಸಂಖ್ಯೆ: ಪಮೂಶಿಇ/ಸಿಬ್ಬಂದಿ-2/ಉ.ನೇ/ವಿ.ಭ.ಮಂ/413/2013-14

ದಿನಾಂಕ:09-10-2014.

ಸರ್ಕಾರದ ಆದೇಶದ ಪ್ರತಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.

ನಿರ್ದೇಶಕರು.
ಪದವಿ ಪೂರ್ವ ಶಿಕ್ಷಣ ಇಲಾಖೆ.